**ಸಾಕ್ಷಿಯನ್ನು ದಿಃ20.07.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಎಎಂಆರ್ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ದಿಃ 14.04.1960ನೇ ಸಾಲಿನಲ್ಲಿ ನನ್ನ ತಂದೆ ಗುರುವಾರೆಡ್ಡಿಯವರು ಅವರ ಸಹೋದರರರು ಮತ್ತು ತಂದೆಯಿಂದ ದಾವಾ ಸ್ವತ್ತನ್ನು ತೆಗೆದುಕೊಂಡು ಒಟ್ಟು ಕುಟುಂಬದಿಂದ ಹೊರಗೆ ಬಂದ ಬಗ್ಗೆ ಹಕ್ಕು ಬಿಡುಗಡೆ ಪತ್ರದ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅದರ ಅಸಲು ಪ್ರತಿ ಎಲ್ಲಿಯೋ ಕಳೆದುಹೋಗಿರುತ್ತದೆ ಎಂದು ಸಾಕ್ಷಿಯು ನುಡಿದಿದ್ದರ ಮೇರೆಗೆ ಸದರಿ ದಾಖಲೆಯನ್ನು ನಿಪಿ 1 ಎಂದು, ಸರ್ವೆ ನಂ. 24/3ಕ್ಕೆ ಸಂಬಂಧಪಟ್ಟಂತೆ ಎಂಟು ಪಹಣಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ 2 ರಿಂದ 9 ಎಂದು, ಸರ್ವೆ ನಂ. 24/4ಕ್ಕೆ ಸಂಬಂಧಪಟ್ಟಂತೆ ಎಂಟು ಪಹಣಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ 10 ರಿಂದ 17 ಎಂದು ಗುರುತಿಸಲಾಯಿತು. ಸರ್ವೆ ನಂ. 24/3 ಮತ್ತು 24/4ಕ್ಕೆ ಸಂಬಂಧಪಟ್ಟಂತೆ ಹಿಸ್ಸಾ ಸರ್ವೆ ಪಕ್ಕಾ ಪುಸ್ತಕದ ದೃಡೀಕೃತ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ 18 ಎಂದು , ಸದರಿ ಸರ್ವೆ ನಂಬರ್‌ಗಳಿಗೆ ಸಂಬಂಧಪಟ್ಟಂತೆ ಎರಡು ಆಕಾರ್ ಬಂದ್‌ಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ 19 ಮತ್ತು 20 ಎಂದು, ಸರ್ವೆ ನಂ. 24/3ಕ್ಕೆ ಸಂಬಂಧಪಟ್ಟಂತೆ ಒಂದು ಇಸಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ 21 ಎಂದು, ಒಂದನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ನನ್ನ ತಂದೆ ಹೆಸರಿನ ಮೇಲೆ ದಾವಾ ಸ್ವತ್ತನ್ನು ಕ್ರಯ ಮಾಡಿಕೊಟ್ಟ ಬಗೆಗ ಕ್ರಮವಾನ್ನು ಕೈಗೊಳ್ಳಲು ಠಾಣೆಗೆ ದೂನ್ನು ನೀಡಿದ್ದು ಸದರಿ ದೂರಿನ ಮೇರೆಗೆ ಪೊಲೀಸರು ಸ್ವೀಕೃತಿಯನ್ನು ನೀಡಿದ್ದು ಸದರಿ ಸ್ವೀಕೃತಿಯನ್ನು ನಿಪಿ 22 ಎಂದು, ಸದರಿ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ 23 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

ಪ್ರತಿವಾದಿಪರ ವಕೀಲರು ಗೈರು ಹಾಜರಿದ್ದು ಪಾಟಿ ಸವಾಲಿಗೆ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**